**ಸಾಕ್ಷಿಗೆ ದಿನಾಂಕ: 08.07.2024 ರಂದು ಕರೆದು ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ**

ವಾದಿಗಳ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆ ಇರುವುದಿಲ್ಲ ಎಂದು ನುಡಿದಿರುತ್ತಾರೆ. ಆದ್ದರಿಂದ ಯಾವುದೇ ಮುಂದುವರೆದ ಮುಖ್ಯ ವಿಚಾರಣೆ ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು. ಹಾಗಾಗಿ ದಾವೆಯನ್ನು ಪುರಸ್ಕರಿಸಬೇಕೆಂದು ಕೋರಿರುತ್ತಾರೆ.

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ SSA ವಕೀಲರಿಂದಃ**

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಖಾಸಗಿ ವಾಹನ ಚಾಲಕನಾಗಿದ್ದೇನೆ. ನನ್ನ ವಾದ ಪತ್ರದಲ್ಲಿ ತೋರಿಸಿರುವ ವಿಳಾಸ ನನ್ನ ಸ್ವಂತ ಮನೆ. ಸದರಿ ಮನೆಯನ್ನು ಹೊರತು ಪಡಿಸಿ ನನ್ನ ಹೆಸರಿನಲ್ಲಿ ಕಿತ್ತೂರಿನ ವಿದ್ಯಾಗಿರಿಯಲ್ಲಿ ಖುಲ್ಲಾ ಜಾಗ ಇರುತ್ತದೆ. ಸದರಿ ದಾವಾ ಜಮೀನು ಈಗ ನಾನು ಹೇಳುತ್ತಿರುವ ಖುಲ್ಲಾ ಜಾಗ.

ದಾವಾ ಆಸ್ತಿಯ ನಂಬರ 1684/47 ಇರುತ್ತದೆ. ವಾದ ಪತ್ರಕ್ಕೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ವಾದ ಪತ್ರದಲ್ಲಿರುವ ವಿಷಯಳನ್ನು ಓದಿ ತಿಳಿದುಕೊಂಡಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪತ್ರದಲ್ಲಿರುವ ಸಂಗತಿಗಳನ್ನು ಸಹ

ಓದಿ ತಿಳಿದುಕೊಂಡಿರುತ್ತೇನೆ. ದಾವಾ ಆಸ್ತಿಯನ್ನು ನಾನು ಮಂಜುನಾಥ ಬೋವಿ ಎಂಬುವವರಿಂದ ಖರೀದಿ ಮಾಡಿಕೊಂಡಿರುತ್ತೇನೆ. ಸದರಿಯವರು ಪೂರ್ಣ ಹೆಸರು ಗೊತ್ತಿರುವುದಿಲ್ಲ. ದಾವಾ ಆಸ್ತಿಯು ಮಂಜುನಾಥ ಬೋವಿಗೆ ಹೇಗೆ ಬಂತು ಎಂದು ತಿಳಿದುಕೊಳ್ಳಲು ನಾನು ಪ್ರಯತ್ನಿಸಿರುವುದಿಲ್ಲ. ದಾವಾ ಆಸ್ತಿಯನ್ನು ಪಂಚಾಯತಿ ಉತಾರವನ್ನು ನೋಡಿ ದಾವಾ ಆಸ್ತಿಯನ್ನು ಖರೀದಿ ಮಾಡಿಕೊಂಡಿರುತ್ತೇನೆ. ಪಂಚಾಯತಿ ಉತಾರವನ್ನು ಬಿಟ್ಟು ಬೇರೆ ಯಾವುದೇ ದಾಖಲೆಗಳನ್ನು ನೋಡಿರುವುದಿಲ್ಲ. ಮಂಜುನಾಥ ಬೋವಿ ಇವರಿಗೂ ಸಹ ದಾವಾ ಆಸ್ತಿಯು ಸದರಿಯವರಿಗೆ ಹೇಗೆ ಬಂತು ಎಂದು ಕೇಳಿರುವುದಿಲ್ಲ ಆದರೆ ಅವರು ಇದು ತಮ್ಮ ಆಸ್ತಿ ಇರುತ್ತದೆ ಎಂದು ಹೇಳಿರುತ್ತಾರೆ. ದಾವಾ ಆಸ್ತಿಯ ಖರೀದಿ ಪೂರ್ವದಲ್ಲಿ Encumbrance ಪ್ರಮಾಣ ಪತ್ರವನ್ನು ತೆಗೆಯಿಸಿರುತ್ತೇವೆ.

ದಾವಾ ಆಸ್ತಿಯನ್ನು ಖರೀದಿ ಮಾಡುವ ಪೂರ್ವದಲ್ಲಿ ಯಾವುದೇ ಪತ್ರಿಕಾ ಪ್ರಕಟನೆಯನ್ನು ಹೊರಡಿಸಿರುವುದಿಲ್ಲ. ದಾವಾ ಆಸ್ತಿಯ ಖರೀದಿಯ ಪೂರ್ವದಲ್ಲಿ ಆಸ್ತಿಯ ಹಕ್ಕು ಕುರಿತು ಯಾವುದೇ ವಕೀಲರ ಅಭೀಪ್ರಾಯವನ್ನು ಸಹ ಪಡೆದಿರುವುದಿಲ್ಲ.

ದಾವಾ ಆಸ್ತಿಯ ಮೂಲತಃ ಮಂಜುನಾಥ ಬೋವಿ ಇವರದ್ದು ಅಲ್ಲ ಹಾಗೂ ಸದರಿ ಆಸ್ತಿಯನ್ನು ಮಾರಾಟ ಮಾಡಲು ಸದರಿ ಮಂಜುನಾಥ ಇವರಿಗೆ ಯಾವುದೇ

ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಅಕ್ಕಪಕ್ಕದಲ್ಲಿರುವರನ್ನು ವಿಚಾರಣೆ ಮಾಡಿರುವುದಿಲ್ಲ. ದಾವಾ ಆಸ್ತಿಯ ಮಾಲೀಕರು ಮಂಜುನಾಥ ಬೋವಿ ಅಲ್ಲ ಹಾಗೂ ದಾವಾ ಆಸ್ತಿಯು ಸರ್ಕಾರದ ಆಸ್ತಿಯಾಗಿರುತ್ತದೆ. ಆದ್ದರಿಂದ ಸದರಿ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಮಂಜುನಾಥ ಹಾಗೂ ನಾನು ಸೇರಿ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯು ಖುಲ್ಲಾ ಜಾಗ ಇದೆ ಎಂದರೆ ಸಾಕ್ಷಿಯು ತಂತಿ ಬೇಲಿ ಹಾಕಿರುತ್ತೇವೆ ಎಂದು ಹೇಳುತ್ತಾರೆ. ತಂತಿ ಬೇಳಿ ಯಾವಾಗ ಹಾಕಿರುತ್ತೀರಿ ಎಂದರೆ ಸಾಕ್ಷಿಯು ಈಗ ಒಂದು ವರ್ಷ ಆಯಿತು ಎಂದು ಹೇಳುತ್ತಾರೆ. ಸದರಿ ವಿಷಯವನ್ನು ನನ್ನ ವಾದ ಪತ್ರದಲ್ಲಾಗಲೀ ಅಥವಾ ಮುಖ್ಯ ವಿಚಾರಣೆ ಪತ್ರದಲ್ಲಾಗಲೀ ನಮೂದಿಸಿರುವುದಿಲ್ಲ. ನಾನು ದಾವಾ ಆಸ್ತಿಯಲ್ಲಿ ಯಾವತ್ತೂ ಕಬ್ಜಾದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆ ಚಾಲ್ತಿಯಲ್ಲಿರುವಾಗ ದಾವಾ ಆಸ್ತಿಯಲ್ಲಿ ತಂತಿ ಬೇಲಿಯನ್ನು ಹಾಕಿರುತ್ತೇವೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಪಶ್ಚಿಮಕ್ಕೆ ಪ್ರತಿವಾದಿ ನಂ. 1 ಇವರ ಮಾಲೀಕತ್ವದ ಆಸ್ತಿ ನಂ. 87 ಇರುತ್ತದೆ ಎಂದು ಬರೆಯಿಸಿರುತ್ತೇನೆ ಎಂದರೆ ನಿಜ. ಸದರಿ ಸರ್ವೆ ನಂ. 87 ರಲ್ಲಿ ನಮ್ಮದು ಯಾವುದೇ ಹಕ್ಕು ಇರುವುದಿಲ್ಲ ಎಂದರೆ ನಿಜ. ನಾವು ಖರೀದಿ ಮಾಡಿದ ದಾವಾ ಆಸ್ತಿಯು NA ಆದ ಆಸ್ತಿ ಇರುತ್ತದೇಯೋ ಇಲ್ಲವೋ ಎಂಬ ಬಗ್ಗೆ ವಿಚಾರ

ಮಾಡಿರುವುದಿಲ್ಲ.  ನಾವು ಖರೀದಿ ಮಾಡಿದ ದಾವಾ ಆಸ್ತಿಯು ಯಾವ ಸರ್ವೆ ನಂಬರದ ಭಾಗವಾಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

ನಾವು ಈ ದಾವೆಯಲ್ಲಿ ಪಂಚಾಯತ ಅಧಿಕಾರಿಗಳ ಸಾಕ್ಷ್ಯ ಮಾಡಿಸುವುದಿಲ್ಲ. ನಾವು ಖರೀದಿ ಮಾಡಿದ ದಾವಾ ಆಸ್ತಿಯು ಸರ್ವೆ ನಂ. 87/1 ರ ಒಂದು ಭಾಗ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ಸರ್ಕಾರದಿಂದ 2 ನೇ ಪ್ರತಿವಾದಿಗಳಿಗೆ ಮಂಜೂರದ 4 ಜಮೀನಿನ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ದಾವೆಯಲ್ಲಿ 2 ನೇ ಪ್ರತಿವಾದಿಯು ಏನು ಪ್ರತಿವಾದ ಪತ್ರ ಹಾಕಿರುತ್ತಾರೆ ಎಂದು ನಮ್ಮ ವಕೀಲರಿಂದ ಓದಿ ತಿಳಿದುಕೊಂಡಿರುತ್ತೇನೆ. ನಾನಾಗಲೀ ಅಥವಾ ನಮಗೆ ಖರೀದಿ ಕೊಟ್ಟಿರುವ ಮಂಜುನಾಥ ಬೋವಿ ಇವರು ದಾವಾ ಆಸ್ತಿಗೆ ಯಾವತ್ತೂ ಮಾಲೀಕರಲ್ಲ ಎಂದು ಪ್ರತಿವಾದಿ ನಂ. 2 ರವರು ತಕರಾರು ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಏನು ಪರಿಹಾರ ಕೇಳಿರುತ್ತೀರಿ ಎಂದರೆ ಸಾಕ್ಷಿಯು ದಾವಾ ಆಸ್ತಿ ನಮ್ಮದು ಇರುತ್ತದೆ ಎಂದು ಕೇಳಿರುತ್ತೇವೆ ಎಂದು ಹೇಳುತ್ತಾರೆ. ದಾವಾ ಆಸ್ತಿಗೆ ನಾನೇ ಮಾಲೀಕರು ಇರುತ್ತೇವೆ ಎಂದು ಉದ್ಘೋಷಣೆ ಮಾಡಲು ಪ್ರಾರ್ಥನೆ ಕೋರಿ ದಾವೆ ಹೂಡಿರುತ್ತೇವೆ. ನಾನು ಹೀಗೆ ಯಾವುದೇ ಪ್ರಾರ್ಥನೆ ಕೋರದೆ ಇದ್ದರೂ ಸಹ ಕೋರಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2 ನೇ ಪ್ರತಿವಾದಿಯವರು ಕಟ್ಟುತ್ತಿರುವ ಕಟ್ಟಡ ಸರ್ವೆ ನಂ. 87 ರಲ್ಲಿ ಮಾತ್ರ ಕಟ್ಟುತ್ತಿದ್ದಾರೆ ಹೊರತು ಯಾವುದೇ ಆಸ್ತಿಯನ್ನು ಅತೀಕ್ರಮಣ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಸರ್ಕಾರದ ಆಸ್ತಿಯಾಗಿರುವುದರಿಂದಸದರಿ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಮಂಜುನಾಥ ಹಾಗೂ ನಾನು ಸೇರಿ ಖೊಟ್ಟಿ ಖಲೆಗಳನ್ನು ಸೃಷ್ಟಿಸಿಕೊಂಡು ಸುಳ್ಳು ದಾವೆಯನ್ನು ಹೂಡಿ ಈಗ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಅದೆ.

**ದಿವಾಣಿ ನ್ಯಾಯಾಧೀಶರು, ಕಿತ್ತೂರ.**